ವಿಜಯ ಕರ್ನಾಟಕ

**Friday, December 16, 2011**

# ಬೆಂಗಳೂರು ಜೈನ್ ವಿವಿಗೆ ಪ್ರಶಸ್ತಿ

▪ ವಿಕ ಸುದ್ದಿಲೋಕ ಮಂಗಳೂರು

ಬೆಂಗಳೂರಿನ ಜೈನ್ ವಿವಿ ತಂಡ ಮಣಿಪಾಲ ವಿಶ್ವವಿದ್ಯಾಲಯದ ಮರೀನಾ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ಗುರುವಾರ ಮುಕ್ತಾಯಗೊಂಡ ದಕ್ಷಿಣ ವಲಯ ಅಂತರ್ ವಿವಿ ಪುರುಷರ ಟೆನಿಸ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಮುಡಿಗೇರಿಸಿಕೊಂಡಿದೆ.

ಮಣಿಪಾಲ ವಿಶ್ವವಿದ್ಯಾಲಯ, ಹೊಸದಿಲ್ಲಿಯ ಭಾರತೀಯ ವಿಶ್ವವಿದ್ಯಾಲಯಗಳ ಅಸೋಸಿಯೇಶನ್ ಆಶ್ರಯದಲ್ಲಿ ನಡೆದ ಈ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಸುತ್ತಿನ ಸೆಣಸಾಟದಲ್ಲಿ ಬೆಂಗಳೂರು ಜೈನ್ ವಿವಿ ತಂಡ 3-0 ಅಂತರದಿಂದ ತಮಿಳುನಾಡಿನ ಎಸ್‌ಆರ್‌ಎಂ ವಿವಿ ವಿರುದ್ಧ ಜಯ ಗಳಿಸಿ, ಪದಾರ್ಪಣೆ ಟೂರ್ನಿಯಲ್ಲೇ ಪ್ರಶಸ್ತಿ ಮುಡಿಗೇರಿಸಿಕೊಂಡ ಸಾಧನೆಗೆ ಪಾತ್ರವಾಯಿತು.

ಎರಡು ವರ್ಷ ಹಿಂದೆಯಷ್ಟೇ ಡೀಮ್ಡ್ ವಿವಿ ಮಾನ್ಯತೆ ಪಡೆದಿದ್ದ ಜೈನ್ ವಿವಿ ತಂಡವು ಸಂಪೂರ್ಣ ಏಕಪಕ್ಷೀಯವಾಗಿ ಸಾಗಿದ ಫೈನಲ್‌ನಲ್ಲಿ ಎದುರಾಳಿ ತಂಡವನ್ನು ಸಿಂಗಲ್ಸ್ ಹಾಗೂ ಡಬಲ್ಸ್‌ಗಳೆರಡರಲ್ಲೂ ಸುಲಭವಾಗಿ ಸದೆ ಬಡಿಯಿತು.

ಮೊದಲ ಸಿಂಗಲ್ಸ್‌ನಲ್ಲಿ ಜೈನ್ ವಿವಿಯ ವಿನೋದ್ ಗೌಡ 6-0, 6-1 ನೇರ ಸೆಟ್‌ಗಳಿಂದ ಎಸ್‌ಆರ್‌ಎಂ ವಿವಿ ತಂಡದ ಪೃಥ್ವಿ ಅವರನ್ನು ಸುಲಭವಾಗಿ ಸೋಲಿಸಿ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಟೂರ್ನಿಯುದ್ದಕ್ಕೂ ಅತ್ಯಂತ ಶ್ರೇಷ್ಠ ಪ್ರದರ್ಶನ ನೀಡಿದ ವಿನೋದ್ ಗೌಡ 18 ವರ್ಷದೊಳಗಿನ ಆಟಗಾರರ ಪೈಕಿ 3ನೇ ಶ್ರೇಯಾಂಕಿತ ಆಟಗಾರ ಕೂಡ ಆಗಿದ್ದಾರೆ.

ಎರಡನೇ ಸಿಂಗಲ್ಸ್‌ನಲ್ಲಿ ಕೂಡ ಜೈನ್ ವಿವಿ ಆಟಗಾರ ಗೆಲುವಿಗೆ ಹೆಚ್ಚು ಪ್ರಯಾಸ ಪಡಬೇಕಾದ ಪರಿಸ್ಥಿತಿ ಎದುರಾಗಿಲ್ಲ. ಸಾಗರ್ ಮಂಜಣ್ಣ 6-3, 6-2ರಿಂದ ಪಿ. ಮಣಿಕಂಠನ್ ವಿರುದ್ಧ ಗೆಲ್ಲುವುದರೊಂದಿಗೆ ತಂಡದ ಮುನ್ನಡೆಯನ್ನು ಇನ್ನಷ್ಟು ಹೆಚ್ಚಿಸಿದರು. ಡಬಲ್ಸ್‌ನಲ್ಲಿ ಜೈನ್ ವಿವಿಯ ಕಿರಣ್-ವಸಂತ್ ಜೋಡಿ 6-2, 6-2ರಿಂದ ಎದುರಾಳಿ ತಂಡದ ಮಾನವ್-ಸಾಹಿಲ್ ಅವರನ್ನು ಸೋಲಿಸಿ ತಂಡದ ಜಯದಲ್ಲಿ ಪ್ರಮುಖ ಪಾತ್ರ ವಹಿಸಿದರು.

**ಒಸ್ಮಾನಿಯಾ ತೃತೀಯ ಸ್ಥಾನಿ :** ಕಳೆದ ವರ್ಷ ಚಾಂಪಿಯನ್ ಆಗಿದ್ದ ಹೈದರಾಬಾದ್‌ನ ಒಸ್ಮಾನಿಯಾ ವಿವಿ ತಂಡ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು. ಗುರುವಾರ 3ನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಒಸ್ಮಾನಿಯಾ ವಿವಿ ತಂಡ 3-0 ಅಂತರದಿಂದ ಅಣ್ಣಾಮಲೈ ವಿವಿ ತಂಡವನ್ನು ಮಣಿಸಿದರು.

ಸಿಂಗಲ್ಸ್‌ಗಳಲ್ಲಿ ಒಸ್ಮಾನಿಯಾ ವಿವಿಯ ಪ್ರದೀಪ್ ದೇಸ್ವಾಲ್ 6-1, 6-7, 6-2ರಿಂದ ಪಿ. ವೆಂಕಟರಮಣನ್ ವಿರುದ್ಧ, ಪ್ರದೀಪ್ ರೆಡ್ಡಿ 6-0, 6-0ಯಿಂದ ಗೌತಮ್ ವಿರುದ್ಧ ಜಯ ಗಳಿಸಿದರೆ, ಡಬಲ್ಸ್‌ನಲ್ಲಿ ಪ್ರದೀಪ್-ತರಣ್ ಜೋಡಿ 6-4, 7-5ರಿಂದ ವೆಂಕಟರಮಣನ್-ಮುಬೀನ್ ಅವರನ್ನು ಸೋಲಿಸಿದರು.



ಟ್ರೋಫಿಯೊಂದಿಗೆ ಬೆಂಗಳೂರು ಜೈನ್ ವಿವಿ ತಂಡದ ಆಟಗಾರರು